ಶ್ರೀ ಗಣೇಶ ಶಾರದ ಗುರುಭ್ಯೋ ನಮಃ

## ಶ್ರೀಕ್ಷೇತ್ರ ಪೊಳಲಿ ದರ್ಶನ

ಭಾರತದ ರಾಜರು ದೇವಿಯನ್ನು ಬಗೆಬಗೆಯ ರೂಪಗಳಲ್ಲಿ ಆರಾಧಿಸಿದರು. ದೇವಿಗಾಗಿ ಭವ್ಯ ದೇವಾಲಯಗಳನ್ನು ಕಟ್ಟಿದರು. ದೇವಿಯ ವೈಭವದ ಉತ್ಸವಗಳನ್ನು ನೆರವೇರಿಸಿದರು. ಕಲೆ - ಸಾಹಿತ್ಯ - ಸಂಗೀತದ ಮೂಲಕ ದೇವಿಯ ಆರಾಧನೆಯನ್ನು ಮಾಡಿದರು. ಕಾಶ್ಮೀರದಲ್ಲಿ ಕ್ಷೀರ ಭವಾನಿ, ಹಿಮಾಚಲ ಪ್ರದೇಶದಲ್ಲಿ ವೈಷ್ಣವಿ, ಉತ್ತರ ಪ್ರದೇಶದಲ್ಲಿ ವಿಶಾಲಾಕ್ಷಿ, ಮಧ್ಯ ಪ್ರದೇಶದಲ್ಲಿ ವಿಂಧ್ಯವಾಸಿನಿ, ಅಸ್ಸಾಮಿನಲ್ಲಿ ಕಾಮಾಖ್ಯಾ ದೇವಿ, ಆಂಧ್ರಪ್ರದೇಶದಲ್ಲಿ ಭ್ರಮರಾಂಬಿಕೆ, ಬಿಹಾರಿನಲ್ಲಿ ಮಂಗಳಗೌರಿ, ಮಹಾರಾಷ್ಟ್ರದಲ್ಲಿ ತುಳಜಾಭವಾನಿ, ತಮಿಳುನಾಡಿನಲ್ಲಿ ಕಾಮಾಕ್ಷಿ, ಕೇರಳದಲ್ಲಿ ಕನ್ಯಾಕುಮಾರಿಯಾಗಿ ನೆಲೆಸಿರುವ ದೇವಿಯು ಕರ್ನಾಟಕದಲ್ಲಿ ಬನಶಂಕರಿಯಾಗಿ, ಚಾಮುಂಡೇಶ್ವರಿಯಾಗಿ, ಮೂಕಾಂಬಿಕೆಯಾಗಿ, ಮಾರಿಕಾಂಬೆಯಾಗಿ, ದುರ್ಗಾಪರಮೇಶ್ವರಿಯಾಗಿ, ಅನ್ನಪೂರ್ಣೇಶ್ವರಿಯಾಗಿ ಪ್ರಸಿದ್ಧಳು.

ದೇವಿಯು ಶ್ರೀರಾಜರಾಜೇಶ್ವರಿಯಾಗಿ ಪ್ರಸಿದ್ಧಳಾಗಿರುವ ಶ್ರೀಕ್ಷೇತ್ರ ಪೊಳಲಿಯ ಮಾನಸಿಕ ದರ್ಶನವನ್ನು, ಅದನ್ನು ಪ್ರತಿಷ್ಠಾಪಿಸಿ ಪೂಜಿಸಿದ ಮಹನೀಯರ ಚರಿತ್ರೆಯನ್ನು ಪಾರಾಯಣೆ ಮಾಡುವ ಕಾರ್ಯಕ್ರಮವನ್ನು, ಶೋಭಕೃತ್ ನಾಮ ಸಂವತ್ಸರದ ಉತ್ತರಾಯಣ ಆಷಾಡಮಾಸದ ಕೃಷ್ಣಪಕ್ಷದ ಬಿದಿಗೆಯಂದು, ನಮ್ಮ ನಾದಾರ್ಚನೆಯ ತಂಡ ಹಮ್ಮಿಕೊಂಡಿದೆ.

ಶ್ರೀಕ್ಷೇತ್ರ ಪೊಳಲಿಯು ಬಹಳ ಪ್ರಾಚೀನವಾದುದು. ಭುವನೇಶ್ವರಿಯು ಭಂಡ ಮಹಾದೈತ್ಯನ ವಧೆಗಾಗಿ ಚಿದಗ್ನಿಕುಂಡದಿಂದ ಲಲಿತಾಭಿಧಾನದಿಂದ ಅವತರಿಸಿ, ಶ್ರೀ ರಾಜರಾಜೇಶ್ವರಿಯಾಗಿ ಮೆರೆದು, ದೈತ್ಯ ಸಂಹಾರವನ್ನು ಮಾಡಿ, ಸಕಲ ಲೋಕಗಳನ್ನು ರಕ್ಷಿಸುತ್ತಿರುವ ಜಗನ್ಮಾತೆ ಎನಿಸಿದ್ದಾಳೆ.

ಭಂಡಾಸುರ ವಧೋದ್ಯುಕ್ತ ಶಕ್ತಿಸೇನಾ ಸಮನ್ವಿತಾ
ಸಂಪತ್ಕರೀ ಸಮಾರೂಢ ಸಿಂಧುರ ವ್ರಜಸೇವಿತಾ ।
ಅಶ್ವಾರೂಢಾಧಿಷ್ಠಿತಾಶ್ವ ಕೋಟಿಕೋಟಿ ಭಿರಾವೃತಾ
ಚಕ್ರರಾಜ ರಥಾರೂಢ ಸರ್ವಾಯುಧ ಪರಿಷ್ಕೃತಾ ।
ಗೇಯಚಕ್ರ ರಥಾರೂಢ ಮಂತ್ರಿಣೀ ಪರಿಸೇವಿತಾ
ಕಿರಿಚಕ್ರ ರಥಾರೂಢ ದಂಡನಾಥಾ ಪುರಸ್ಕೃತಾ ।
ಜ್ವಾಲಾಮಾಲಿನಿ ಕಾಕ್ಷಿಪ್ತ ವಹ್ನಿಪ್ರಾಕಾರ ಮಧ್ಯಗಾ
ಭಂಡಸೈನ್ಯ ವಧೋದ್ಯುಕ್ತ ಶಕ್ತಿ ವಿಕ್ರಮಹರ್ಷಿತಾ ।
ನಿತ್ಯಾ ಪರಾಕ್ರಮಾಟೋಪ ನಿರೀಕ್ಷಣ ಸಮುತ್ಸುಕಾ

ಭಂಡಪುತ್ರ ವಧೋದ್ಯುಕ್ತ ಬಾಲಾವಿಕ್ರಮ ನಂದಿತಾ ।
ಮಂತ್ರಿಣ್ಯಂಬಾ ವಿರಚಿತ ವಿಷಂಗ ವಧತೋಷಿತಾ
ವಿಶುಕ್ರ ಪ್ರಾಣಹರಣ ವಾರಾಹೀ ವೀರ್ಯನಂದಿತಾ ।
ಕಾಮೇಶ್ವರ ಮುಖಾಲೋಕ ಕಲ್ಪಿತ ಶ್ರೀ ಗಣೇಶ್ವರಾ
ಮಹಾಗಣೇಶ ನಿರ್ಭಿನ್ನ ವಿಘ್ನಯಂತ್ರ ಪ್ರಹರ್ಷಿತಾ ।
ಭಂಡಾಸುರೇಂದ್ರ ನಿರ್ಮುಕ್ತ ಶಸ್ತ್ರ ಪ್ರತ್ಯಸ್ತ್ರ ವರ್ಷಿಣೀ
ಕರಾಂಗುಳಿ ನಖೋತ್ಪನ್ನ ನಾರಾಯಣ ದಶಾಕೃತಿಃ ।
ಮಹಾಪಾಶುಪತಾಸ್ತ್ರಾಗ್ನಿ ನಿರ್ದಗ್ಧಾಸುರ ಸೈನಿಕಾ
ಕಾಮೇಶ್ವರಾಸ್ತ್ರ ನಿರ್ದಗ್ಧ ಸಭಂಡಾಸುರ ಶೂನ್ಯಕಾ ।
ಬ್ರಹ್ಮೋಪೇಂದ್ರ ಮಹೇಂದ್ರಾದಿ ದೇವಸಂಸ್ತುತ ವೈಭವಾ
ಹರನೇತ್ರಾಗ್ನಿ ಸಂದಗ್ಧ ಕಾಮ ಸಂಜೀವನೌಷಧಿಃ ।

ಎಂದು ವಶಿನ್ಯಾದಿ ವಾಗ್ದೇವತೆಗಳು ಭಂಡಾಸುರನ ವಧೆಯ ವರ್ಣನೆ ಮಾಡಿದ್ದಾರೆ. ಶ್ರೀದೇವಿಯು ಅಸುರನನ್ನು ನಿಗ್ರಹಿಸಿ ಈಶ್ವರನೊಡನೆ ಆಕಾಶಾಂತರ್ಗತವಾದ ಕಳಾಸ್ವರೂಪದಲ್ಲಿ ಬ್ರಹ್ಮಾಂಡವಿರುವವರೆಗೂ ಸಗುಣದಲ್ಲಿ ಇದ್ದೇ ಇರುತ್ತಾಳೆ. ಲೋಕೋದ್ಧಾರಕ್ಕೋಸ್ಕರ ಆಗಿರುವ ದೇವಿಯ ಮತ್ತು ದೇವನ ಅವತಾರಗಳೆಲ್ಲವೂ ಕಳಾ ಸ್ವರೂಪದಿಂದಲೇ ಆಗಿರುತ್ತವೆ. ಜೀವಕೋಟಿಗಳ ರೂಪಾತಿಶಯಕ್ಕೆ ಆದಿಕಾರಣವಾಗಿ ಕಳಾರೂಪದಲ್ಲಿರುವ ಶ್ರೀದೇವಿಯ ರೂಪಿನ ಪ್ರಭೆಯನ್ನು ವರ್ಣಿಸಲು ನರರಿಗೆ ಸಾಧ್ಯವೇ ಇಲ್ಲದಿರುವುದರಿಂದ ಮಹಾತ್ರಿಪುರಸುಂದರಿ ಎನಿಸಿಕೊಂಡಿರುವಳು. ಆಕಾಶಾಂತರ್ಗತವಾದ ಕಳಾಸ್ವರೂಪವು ನಮ್ಮ ಈ ಚರ್ಮ ಚಕ್ಷುಸ್ಸಿಗೆ ಗೋಚರವಾಗುವುದಿಲ್ಲ. ಆ ದೇವಿಯನ್ನು ಪರಮ ಭಕ್ತಿಯಿಂದ ಯಾರು ಉಪಾಸನೆ ಮಾಡುತ್ತಾರೋ ಅಂತಹವರ ಪುಣ್ಯ ಪರಿಪಾಕವನ್ನು ಅನುಸರಿಸಿ ಉಪಾಸಕನ ಅಂತರ್ಮುಖವಾದ ಜ್ಞಾನ ಚಕ್ಷಸ್ಸನ್ನು ತೆರೆದು ಕಳಾ ಸ್ವರೂಪದಲ್ಲಿ ಶ್ರೀದೇವಿಯು ದರ್ಶನವನ್ನು ಕೊಡುವಳು. ಮೋಕ್ಷಕಾಮರಾಗಿ ಜ್ಞಾನಮಾರ್ಗದಿಂದ ಆ ಜಗದಂಬೆಯನ್ನು ಉಪಾಸಿಸಿದರೆ ಶ್ರೀದೇವಿಯು ಅಸುರ ತತ್ವದಲ್ಲಿರುವ ಉಪಾಸಕನ ಅವಿದ್ಯೆಯನ್ನು ನಿಗ್ರಹಿಸಿ ಮೋಕ್ಷ ಸಾಮ್ರಾಜ್ಯವಾದ ತನ್ನ ಸಾಯುಜ್ಯವನ್ನೇ ಕೊಡುವಳು.

ಇಹ ಪರಗಳ ಬೇಡಿಕೆಗಳನ್ನು ಸಮಾನವಾಗಿ ಕರುಣಿಸಿದ ಇತಿಹಾಸ ಇರುವ ಪುಣ್ಯ ಕ್ಷೇತ್ರ **ಶ್ರೀಪೊಳಲಿ**. ಶ್ರೀ ರಾಜರಾಜೇಶ್ವರೀ ದೇವಿಯ ಮೃಣ್ಮಯ ಮೂರ್ತಿಯನ್ನು ಪರಿವಾರದೊಂದಿಗೆ ನಿರ್ಮಿಸಿ, ಪ್ರತಿಷ್ಠಾಪಿಸಿ, ಪೂಜಿಸಿ, ದೇವಿಯ ಸಾಕ್ಷಾತ್ಕಾರ ಮತ್ತು ಇಷ್ಟಾರ್ಥ ಸಿದ್ಧಿಯನ್ನು ಪಡೆದ ಸುರಥನೆಂಬ

ಮಹಾರಾಜ ಮತ್ತು ಮೋಕ್ಷವನ್ನು ಪಡೆದ ಸಮಾಧಿ ಎಂಬ ವೈಶ್ಯ. ದುರ್ಗಾ ಸಪ್ತಶತೀ ತ್ರಯೋದಶ ಅಧ್ಯಾಯದಲ್ಲಿ ಹೇಳಿರುವಂತೆ,

ಸ ಚ ವೈಶ್ಯಸ್ತಪಸ್ತೇಪೇ ದೇವೀ ಸೂಕ್ತಂ ಪರಂ ಜಪನ್ ।
ತೌ ತಸ್ಮಿನ್ ಪುಲಿನೇ ದೇವ್ಯಾಃ ಕೃತ್ವಾ ಮೂರ್ತಿಂ ಮಹೀಮಯೀಂ।
ಅರ್ಹಣಾಂ ಚಕ್ರತುಸ್ತಸ್ಯಾಃ ಪುಷ್ಪಧೂಪಾಗ್ನಿತರ್ಪಣೈಃ ।
ನಿರಾಹಾರೌ ಯತಾಹಾರೌ ತನ್ಮನಸ್ಕೌ ಸಮಾಹಿತೌ।
ದದತುಸ್ತೌ ಬಲಿಂಚೈವ ನಿಜಗಾತ್ರಾಸೃಗುಕ್ಷಿತಂ ।
ಏವಂ ಸಮಾರಾಧಯತೋಸ್ತ್ರಿಭಿರ್ವರ್ಷೈರ್ಯತಾತ್ಮನೋಃ।
ಪರಿತುಷ್ಟಾ ಜಗದ್ಧಾತ್ರೀ ಪ್ರತ್ಯಕ್ಷಂ ಪ್ರಾಹ ಚಂಡಿಕಾ ॥

ಶಕ್ತಿ - ದೈತ್ಯರ ಸಮರ ಗಾಥೆಯನ್ನು ಸ್ವಾರಸ್ಯ ಪೂರ್ಣವಾಗಿ ನಮ್ಮ ಮುಂದಿಡುವ ಮಾರ್ಕಂಡೇಯ ಪುರಾಣದ ಭಾಗವಾಗಿರುವ **ದುರ್ಗಾ ಸಪ್ತಶತೀ**,

ಭಗವದ್ಗೀತೆಯಂತೆಯೇ ದುರ್ಗಾ ಸಪ್ತಶತೀ 700 ಶ್ಲೋಕಗಳಲ್ಲಿ ವರ್ಣಿಸಲ್ಪಟ್ಟಿದೆ. ಶತ್ರುರಾಜರ ಸಂಚಿನಿಂದ ಪಟ್ಟ ತೊರೆದ ಸುರಥನೆಂಬ ರಾಜ ಮತ್ತು ಸಂಸಾರ, ಸಕಲೈಶ್ವರ್ಯದಿಂದ ವಂಚಿತನಾಗಿ ಬರಿಗೈ ದಾಸನಾದ ಸಮಾಧಿಯೆಂಬ ವೈಶ್ಯನೂ, ಸುಮೇಧ ಮುನಿಗಳ ಆಶ್ರಮಕ್ಕೆ ಬಂದು ತಮ್ಮ ಕಷ್ಟ ಕಾರ್ಪಣ್ಯಗಳ ಕಾರಣ ಮತ್ತು ತಮ್ಮನ್ನು ತೀವ್ರವಾಗಿ ಕಾಡುತ್ತಿರುವ ದುಃಖ, ವ್ಯಾಮೋಹ, ಮಮಕಾರಗಳಿಗೆ ಪರಿಹಾರವನ್ನು ಕೇಳಿದಾಗ, ಸುಮೇಧ ಮುನಿಗಳು, ದುರ್ಗೆಯ ದುಷ್ಟ ಮರ್ದನ, ಶಿಷ್ಟ ರಕ್ಷಣದ ಅನಂತ ಲೀಲೆಗಳನ್ನು ರಮಣೀಯವಾಗಿ ವರ್ಣಿಸಿರುವ ಪರಮ ಕಲ್ಯಾಣಕಾರಿಯಾದ, ಮಹಾಮಾರಿಕಾ ಉಪದ್ರವಗಳನ್ನು, ಆಧ್ಯಾತ್ಮಿಕ, ಆದಿದೈವಿಕ, ಆದಿಭೌತಿಕ, ಉತ್ಪಾತಗಳನ್ನು ಶಮನಗೊಳಿಸುವ ಪಾರಾಯಣ ಗ್ರಂಥ **ದುರ್ಗಾ ಸಪ್ತಶತೀ.**

ಒಮ್ಮೆ ಪ್ರಳಯದ ಅವಸಾನ ಕಾಲದಲ್ಲಿ ಮಹಾವಿಷ್ಣುವು ಪ್ರಳಯ ಜಲದಲ್ಲಿ ಶೇಷನ ಹಾಸಿಗೆಯ ಮೇಲೆ ಯೋಗ ನಿದ್ರೆಯಲ್ಲಿದ್ದನು. ಆಗ ವಿಷ್ಣುವಿನ ಕರ್ಣದ ಮಲದಿಂದ ಮಧುಕೈಟಭರೆಂಬ ಮಹಾದೈತ್ಯರು ಜನಿಸಿ ವಿಷ್ಣುವಿನ ನಾಭಿಕಮಲದಲ್ಲಿದ್ದ ಬ್ರಹ್ಮನನ್ನೇ ಕೊಲ್ಲಲೆತ್ನಿಸಿದರು. ಬ್ರಹ್ಮದೇವನ ಮೊರೆ ವಿಷ್ಣುವಿಗೆ ಗೋಚರವಾಗಲಿಲ್ಲ. ಆಗ ಬ್ರಹ್ಮನು ಪರಮಾತ್ಮನ ಕಣ್ಣುಗಳಲ್ಲಿ ಯೋಗ ನಿದ್ರಾರೂಪದಿಂದ ಅವ್ಯಕ್ತವಾಗಿ ನೆಲೆಸಿರುವ ಮಾಯಾದೇವಿಯನ್ನು ಸ್ತೋತ್ರ ಮಾಡಿದನು. ಆಕೆಯು ಹರಿಯನ್ನೆಚ್ಚರಿಸಿ ದೈತ್ಯ ಸಂಹಾರ ಮಾಡಿಸಿದಳು. ಹೀಗೆ ಬ್ರಹ್ಮನಿಂದ ಸ್ತುತಿಸಲ್ಪಟ್ಟು ವ್ಯಕ್ತ ರೂಪದಿಂದ ಆವಿರ್ಭವಿಸಿದ ದೇವಿ **ಶ್ರೀಮಹಾಕಾಳಿ**.

ಕಾಲಾಂತರದಲ್ಲಿ ಮಹಿಷಾಸುರನೆಂಬ ದೈತ್ಯನು ಬ್ರಹ್ಮನಿಂದ ವರ ಪಡೆದು ತ್ರಿಮೂರ್ತಿಗಳನ್ನೂ ಇಂದ್ರಾದಿಗಳನ್ನೂ ತೃಣಕ್ಕೆ ಬಗೆದು ಸೋಲಿಸಿ ಮೂರು ಲೋಕಗಳನ್ನು ಸ್ವಾಧೀನ ಪಡಿಸಿಕೊಂಡು

ಪೀಡಿಸುತ್ತಿದ್ದನು. ಆಗ ಶಕ್ರಾದಿಗಳ ಪ್ರಾರ್ಥನೆಗೆ ಒಲಿದು, ಆದಿಮಾಯೆಯು ಸಕಲ ದೇವತೆಗಳ ತೇಜಸ್ಸಿನ ರೂಪದಿಂದ ಅವತರಿಸಿ, ಮಾಹಿಷಾದಿಗಳನ್ನು ಸಂಹರಿಸಿ, ಲೋಕ ಸಂರಕ್ಷಣೆಯನ್ನು ಮಾಡಿದಳು. ಈ ಅವತಾರ ಮೂರ್ತಿ **ಶ್ರೀಮಹಾಲಕ್ಷ್ಮಿ.**

ಮತ್ತೊಮ್ಮೆ ಶುಂಭ ನಿಶುಂಭರೆಂಬ ದಾನವರು ಯಥಾ ಪ್ರಕಾರ ಬ್ರಹ್ಮನ ವರದಿಂದ ಬಲವಂತರಾಗಿ ಇಂದ್ರಾದಿಗಳನ್ನು ಸೋಲಿಸಿ, ಸ್ವರ್ಗದಿಂದ ಹೊರಗಟ್ಟಿ, ತಾವೇ ತ್ರೈಲೋಕ್ಯಾಧಿಪತಿಗಳಾಗಿ ಧರ್ಮ ಸೇತುವನ್ನು ನಾಶ ಮಾಡುತ್ತಿದ್ದರು. ದೇವತೆಗಳು ಹಿಮಾಲಯಕ್ಕೆ ಹೋಗಿ ಆದಿಶಕ್ತಿಯ ಮೊರೆ ಹೊಕ್ಕರು. ಆಗ ಆ ಜಗನ್ಮಾತೆಯು ಪರಮ ಸುಂದರಿಯಾದ ಸ್ತ್ರೀ ರೂಪದಿಂದ ಪ್ರತ್ಯಕ್ಷಳಾಗಿ ದೇವತೆಗಳನ್ನು ಸಂತೈಸಿ, ದಾನವರ ರಾಜ್ಯಕ್ಕೆ ತೆರಳಿದಳು. ಧೂಮ್ರಲೋಚನ, ಚಂಡ, ಮುಂಡ, ರಕ್ತಬೀಜ, ಶುಂಭ, ನಿಶುಂಭರೆಲ್ಲರನ್ನೂ ಸಂಹರಿಸಿ ತ್ರೈಲೋಕ್ಯವನ್ನೂ ಸಂರಕ್ಷಿಸಿದಳು. ಮುಂದೆಯೂ ಸಹ ಇಂತಹ ದಾನವರ ಪೀಡೆಯು ಉಂಟಾದಾಗಲೆಲ್ಲಾ ತಾನು ಅವತರಿಸಿ, ಅವರನ್ನು ನಾಶ ಮಾಡುವೆನೆಂದು ಅಭಯವಿತ್ತ ಮಹಾಮಾತೆ **ಶ್ರೀ ಮಹಾಸರಸ್ವತಿ**.

ಪರಮೇಶ್ವರಿಯನ್ನು ಆಶ್ರಯದಾತಳೆಂದು ಅರಿತು ಮೊರೆ ಹೋದರೆ ಆರಾಧಿತಳಾದ ದೇವಿ, ಭೋಗ ಸ್ವರ್ಗ ಅಪವರ್ಗ ಪ್ರದಾನ ಮಾಡುವಳೆಂಬ ಸುಮೇಧರ ಉಪದೇಶವನ್ನು ಪಾಲಿಸಿ, ಸುರಥ ಮಹಾರಾಜ ಮತ್ತು ಸಮಾಧಿಯರು ದೇವಿಯ ದರ್ಶನಾಪೇಕ್ಷೆಯಿಂದಲೂ, ತಮ್ಮನ್ನು ತಿರಸ್ಕರಿಸಿದ ಸಂಬಂಧಿಕರ ಮೇಲೆ ತಮಗಿರುವ ಅಧಿಕ ಮಮಕಾರದ ಮೂಲಕ ಉಂಟಾದ ದುಃಖದಿಂದಲೂ, ಆ ಮುನಿಗಳ ಆಶ್ರಮದಿಂದ ಸ್ವಲ್ಪ ದೂರದಲ್ಲಿ ನದೀ ತೀರದಲ್ಲಿರುವ ನೀರು ತೊಲಗಿದ ಮಳಲ ದಿಣ್ಣೆಯಲ್ಲಿ ಪರ್ಣಶಾಲೆ ಮಾಡಿಕೊಂಡು, ಅದರಲ್ಲಿ ಮೃಣ್ಮಯವಾದ ದೇವೀ ಮೂರ್ತಿಯನ್ನು ಸಪರಿವಾರವಾಗಿ, ತಂತ್ರ ಶಾಸ್ತ್ರ ಶಿಲ್ಪ ಶಾಸ್ತ್ರಗಳಿಗೆ ಅನುಗುಣವಾಗಿ ನಿರ್ಮಾಣ ಮಾಡಿಕೊಂಡರು. ಸುಮೇಧರು ಉಪದೇಶಿಸಿದ ಉತ್ತಮವಾದ ದೇವೀ ಸೂಕ್ತವನ್ನು ಪಠಿಸುತ್ತಾ ಆ ಮೂರ್ತಿಯಲ್ಲಿ ಮಹಾಕಾಳೀ, ಮಹಾಲಕ್ಷ್ಮೀ, ಮಹಾ ಸರಸ್ವತೀ ದೇವಿಯರ ಸಮಷ್ಟಿ ಶಕ್ತಿ ರೂಪಿಣಿಯಾದ ಚಂಡಿಕಾದೇವಿಯನ್ನು ಆವಾಹಿಸಿ, ಗಂಧ, ಪುಷ್ಪ, ದೀಪ, ಧೂಪ, ನೈವೇದ್ಯ, ತರ್ಪಣ, ಹೋಮಾದಿಗಳಿಂದ ಆ ದೇವಿಯನ್ನು ಆರಾಧಿಸತೊಡಗಿದರು. ಆಹಾರ ಪರಿತ್ಯಾಗ ಮಾಡಿ, ದೇವಿಯಲ್ಲಿ ಮನಸ್ಸು ನೆಲೆ ನಿಲ್ಲಿಸಿದವರಾಗಿ ತಮ್ಮ ಶರೀರಗಳಿಂದ ರಕ್ತವನ್ನು ಬಲಿಕೊಟ್ಟು ಮಾಡಿದ ಆರಾಧನೆಗೆ ದೇವಿ ಸಂತುಷ್ಟಳಾಗಿ ಪ್ರತ್ಯಕ್ಷವಾದ ದಿವ್ಯ ಕ್ಷೇತ್ರ **ಶ್ರೀಪೊಳಲಿ.** ನಾವೂ ಸಹ ಸುರಥ ಮತ್ತು ಸಮಾಧಿಯರಂತೆ ದೇವೀಸೂಕ್ತ ಪಾರಾಯಣೆ ಮಾಡೋಣ.

**ದೇವೀ ಸೂಕ್ತಮ್**

ಓಂ ಅ॒ಹಂ ರು॒ದ್ರೇಭಿ॒ರ್ವಸು॑ಭಿಶ್ಚರಾಮ್ಯ॒ಹಮಾ॑ದಿ॒ತ್ಯೈರು॒ತ ವಿ॒ಶ್ವದೇ॑ವೈಃ ।

ಅ॒ಹಂ ಮಿ॒ತ್ರಾವರು॑ಣೋ॒ಭಾ ಬಿ॑ಭರ್ಮ್ಯ॒ಹಮಿಂ॑ದ್ರಾ॒ಗ್ನೀ ಅ॒ಹಮ॒ಶ್ವಿನೋ॒ಭಾ ॥1॥

ಅ॒ಹಂ ಸೋಮ॑ಮಾಹ॒ನಸಂ॒॑ ಬಿಭರ್ಮ್ಯ॒ಹಂ ತ್ವಷ್ಟಾ॑ರಮು॒ತ ಪೂ॒ಷಣ॒ಂ ಭಗಂ॑ ।
ಅ॒ಹಂ ದಧಾಮಿ॒ ದ್ರವಿ॑ಣಂ ಹ॒ವಿಷ್ಮ॑ತೇ ಸುಪ್ರಾ॒ವ್ಯೇ॒ ಯೇ॑ 3 ಯಜ॑ಮಾನಾಯ ಸುನ್ವ॒ತೇ ॥2॥
ಅ॒ಹಂ ರಾಷ್ಟ್ರೀ॑ ಸ॒ಂಗಮ॑ನೀ॒ ವಸೂ॑ನಾಂ ಚಿಕಿ॒ತುಷೀ॑ ಪ್ರಥ॒ಮಾ ಯ॒ಜ್ಞಿಯಾ॑ನಾಮ್ ।
ತಾಂ ಮಾ॑ ದೇ॒ವಾ ವ್ಯ॑ದಧುಃ ಪುರು॒ತ್ರಾ ಭೂರಿ॑ಸ್ಥಾತ್ರಾ॒ಂ ಭೂ॒ರ್ಯಾ॑ವೇ॒ಶಯಂತೀ॑ಮ್ ॥3॥
ಮಯಾ॒ ಸೋ ಅನ್ನ॑ಮತ್ತಿ॒ ಯೋ ವಿ॒ಪಶ್ಯ॑ತಿ॒ ಯಃ ಪ್ರಾಣಿ॑ತಿ॒ ಯ ಈಂ॑ ಶೃ॒ಣೋತ್ಯು॒ಕ್ತಮ್ ।
ಅ॒ಮ॒ನ್ತ॒ವೋ॒ಮಾಂತ ಉಪ॑ಕ್ಷಿಯಂತಿ॒ ಶ್ರು॒ಧಿ ಶ್ರು॑ತಂ ಶ್ರದ್ಧಿ॒ವಂ ತೇ॑ ವದಾಮಿ ॥4॥
ಅ॒ಹಮೇ॒ವ ಸ್ವ॒ಯಮಿ॒ದಂ-ವ॑ದಾ॑ಮಿ॒ ಜುಷ್ಟಂ॑ ದೇ॒ವೇಭಿ॑ರು॒ತ ಮಾನು॑ಷೇಭಿಃ ।
ಯಂ ಕಾ॒ಮಯೇ॒ ತಂ ತ॑ಮು॒ಗ್ರಂ ಕೃ॑ಣೋಮಿ॒ ತಂ ಬ್ರ॒ಹ್ಮಾ॑ಣ॒ಂ ತಮೃ॑ಷಿ॒ಂ ತಂ ಸು॑ಮೇ॒ಧಾಮ್ ॥5॥
ಅ॒ಹಂ ರು॒ದ್ರಾಯ॒ ಧನು॒ರಾತ॑ನೋಮಿ ಬ್ರಹ್ಮ॒ದ್ವಿಷೇ॒ ಶರ॑ವೇ ಹಂತ॒ ವಾ ಉ॑ ।
ಅ॒ಹಂ ಜನಾ॑ಯ ಸ॒ಮದಂ॑ ಕೃಣೋಮ್ಯ॒ಹಂ ದ್ಯಾವಾ॑ಪೃಥಿ॒ವೀ ಆವಿ॑ವೇಶ ॥6॥
ಅ॒ಹಂ ಸು॑ವೇ ಪಿ॒ತರ॑ಮಸ್ಯ ಮೂ॒ರ್ಧನ್ ಮಮ॒ ಯೋನಿ॑ರ॒ಪ್ಸ್ವ॒ಂತಃ ಸ॑ಮು॒ದ್ರೇ ।
ತತೋ॒ ವಿತಿ॑ಷ್ಠೇ॒ ಭುವ॒ನಾನು॒ ವಿಶ್ವೋ॒ತಾಮೂಂ ದ್ಯಾಂ-ವ॒॑ರ್ಷ್ಮ॑ಣೋಪ॑ ಸ್ಪೃಶಾಮಿ ॥7॥
ಅ॒ಹಮೇ॒ವ ವಾತ ಇವ॒ ಪ್ರವಾ॑ಮ್ಯಾ-ರಭ॑ಮಾಣಾ॒ ಭುವ॑ನಾನಿ॒ ವಿಶ್ವಾ॑ ।
ಪ॒ರೋ ದಿ॒ವಾಪ॒ರ ಏ॒ನಾ ಪೃ॑ಥಿ॒ವ್ಯೈ-ತಾವ॑ತೀ ಮಹಿ॒ನಾ ಸಂಬ॑ಭೂವ ॥8॥

ಓಂ ಶಾಂತಿ॒ಃ ಶಾಂತಿ॒ಃ ಶಾಂತಿ॑ಃ ॥

**ಅಪರಾಜಿತ ಸ್ತೋ॒ತ್ರಮ್**

ನಮೋ ದೇವ್ಯೈ ಮಹಾದೇವ್ಯೈ ಶಿವಾಯೈ ಸತತಂ ನಮಃ।
ನಮಃ ಪ್ರಕೃತ್ಯೈ ಭದ್ರಾಯೈ ನಿಯತಾಃ ಪ್ರಣತಾಃ ಸ್ಮತಾಂ ॥
ರೌದ್ರಾಯ ನಮೋ ನಿತ್ಯಾಯೈ ಗೌರ್ಯೈ ಧಾತ್ರ್ಯೈ ನಮೋ ನಮಃ
ಜ್ಯೋತ್ಸ್ನಾಯೈ ಚೇಂದುರೂಪಿಣ್ಯೈ ಸುಖಾಯೈ ಸತತಂ ನಮಃ ॥
ಕಳ್ಯಾಣ್ಯೈ ಪ್ರಣತಾ ವೃದ್ಧ್ಯೈ ಸಿದ್ಧ್ಯೈ ಕುರ್ಮೋ ನಮೋ ನಮಃ।
ನೈರೃತ್ಯೈ ಭೂಭೃತಾಂ ಲಕ್ಷ್ಮ್ಯೈ ಶರ್ವಾಣ್ಯೈ ತೇ ನಮೋ ನಮಃ ॥
ದುರ್ಗಾಯೈ ದುರ್ಗಪಾರಾಯೈ ಸಾರಾಯೈ ಸರ್ವಕಾರಿಣ್ಯೈ
ಖ್ಯಾತ್ಯೈ ತಥೈವ ಕೃಷ್ಣಾಯೈ ಧೂಮ್ರಾಯೈ ಸತತಂ ನಮಃ ॥
ಅತಿಸೌಮ್ಯತಿರೌದ್ರಾಯೈ ನತಾಸ್ತಸ್ಯೈ ನಮೋ ನಮಃ
ನಮೋ ಜಗತ್ಪ್ರತಿಷ್ಠಾಯೈ ದೇವ್ಯೈ ಕೃತ್ಯೈ ನಮೋ ನಮಃ ॥

ಯಾದೇವೀ ಸರ್ವಭೂತೇಷು ವಿಷ್ಣುಮಾಯೇತಿ ಶಬ್ಧಿತಾ।

ನಮಸ್ತಸ್ಯೈ, ನಮಸ್ತಸ್ಯೈ,ನಮಸ್ತಸ್ಯೈ ನಮೋನಮಃ ॥

ಯಾದೇವೀ ಸರ್ವಭೂತೇಷು ಚೇತನೇತ್ಯಭಿಧೀಯತೇ।

ನಮಸ್ತಸ್ಯೈ, ನಮಸ್ತಸ್ಯೈ,ನಮಸ್ತಸ್ಯೈ ನಮೋನಮಃ ॥

ಯಾದೇವೀ ಸರ್ವಭೂತೇಷು ಬುದ್ಧಿರೂಪೇಣ ಸಂಸ್ಥಿತಾ।

ನಮಸ್ತಸ್ಯೈ, ನಮಸ್ತಸ್ಯೈ,ನಮಸ್ತಸ್ಯೈ ನಮೋನಮಃ ॥

ಯಾದೇವೀ ಸರ್ವಭೂತೇಷು ನಿದ್ರಾರೂಪೇಣ ಸಂಸ್ಥಿತಾ।

ನಮಸ್ತಸ್ಯೈ, ನಮಸ್ತಸ್ಯೈ,ನಮಸ್ತಸ್ಯೈ ನಮೋನಮಃ ॥

ಯಾದೇವೀ ಸರ್ವಭೂತೇಷು ಕ್ಷುಧಾರೂಪೇಣ ಸಂಸ್ಥಿತಾ

ನಮಸ್ತಸ್ಯೈ, ನಮಸ್ತಸ್ಯೈ,ನಮಸ್ತಸ್ಯೈ ನಮೋನಮಃ ॥

ಯಾದೇವೀ ಸರ್ವಭೂತೇಷು ಛಾಯಾರೂಪೇಣ ಸಂಸ್ಥಿತಾ

ನಮಸ್ತಸ್ಯೈ, ನಮಸ್ತಸ್ಯೈ,ನಮಸ್ತಸ್ಯೈ ನಮೋನಮಃ ॥

ಯಾದೇವೀ ಸರ್ವಭೂತೇಷು ಶಕ್ತಿರೂಪೇಣ ಸಂಸ್ಥಿತಾ

ನಮಸ್ತಸ್ಯೈ, ನಮಸ್ತಸ್ಯೈ,ನಮಸ್ತಸ್ಯೈ ನಮೋನಮಃ ॥

ಯಾದೇವೀ ಸರ್ವಭೂತೇಷು ತೃಷ್ಣಾರೂಪೇಣ ಸಂಸ್ಥಿತಾ

ನಮಸ್ತಸ್ಯೈ, ನಮಸ್ತಸ್ಯೈ,ನಮಸ್ತಸ್ಯೈ ನಮೋನಮಃ ॥

ಯಾದೇವೀ ಸರ್ವಭೂತೇಷು ಕ್ಷಾಂತಿರೂಪೇಣ ಸಂಸ್ಥಿತಾ

ನಮಸ್ತಸ್ಯೈ, ನಮಸ್ತಸ್ಯೈ,ನಮಸ್ತಸ್ಯೈ ನಮೋನಮಃ ॥

ಯಾದೇವೀ ಸರ್ವಭೂತೇಷು ಜಾತಿರೂಪೇಣ ಸಂಸ್ಥಿತಾ

ನಮಸ್ತಸ್ಯೈ, ನಮಸ್ತಸ್ಯೈ,ನಮಸ್ತಸ್ಯೈ ನಮೋನಮಃ ॥

ಯಾದೇವೀ ಸರ್ವಭೂತೇಷು ಲಜ್ಜಾರೂಪೇಣ ಸಂಸ್ಥಿತಾ

ನಮಸ್ತಸ್ಯೈ, ನಮಸ್ತಸ್ಯೈ,ನಮಸ್ತಸ್ಯೈ ನಮೋನಮಃ ॥

ಯಾದೇವೀ ಸರ್ವಭೂತೇಷು ಶಾಂತಿರೂಪೇಣ ಸಂಸ್ಥಿತಾ

ನಮಸ್ತಸ್ಯೈ, ನಮಸ್ತಸ್ಯೈ,ನಮಸ್ತಸ್ಯೈ ನಮೋನಮಃ ॥

ಯಾದೇವೀ ಸರ್ವಭೂತೇಷು ಶ್ರದ್ಧಾರೂಪೇಣ ಸಂಸ್ಥಿತಾ

ನಮಸ್ತಸ್ಯೈ, ನಮಸ್ತಸ್ಯೈ,ನಮಸ್ತಸ್ಯೈ ನಮೋನಮಃ ॥

ಯಾದೇವೀ ಸರ್ವಭೂತೇಷು ಕಾಂತಿರೂಪೇಣ ಸಂಸ್ಥಿತಾ
ನಮಸ್ತಸ್ಯೈ, ನಮಸ್ತಸ್ಯೈ,ನಮಸ್ತಸ್ಯೈ ನಮೋನಮಃ ॥
ಯಾದೇವೀ ಸರ್ವಭೂತೇಷು ಲಕ್ಷ್ಮೀರೂಪೇಣ ಸಂಸ್ಥಿತಾ
ನಮಸ್ತಸ್ಯೈ, ನಮಸ್ತಸ್ಯೈ,ನಮಸ್ತಸ್ಯೈ ನಮೋನಮಃ ॥
ಯಾದೇವೀ ಸರ್ವಭೂತೇಷು ವೃತ್ತಿರೂಪೇಣ ಸಂಸ್ಥಿತಾ
ನಮಸ್ತಸ್ಯೈ, ನಮಸ್ತಸ್ಯೈ,ನಮಸ್ತಸ್ಯೈ ನಮೋನಮಃ ॥
ಯಾದೇವೀ ಸರ್ವಭೂತೇಷು ಸ್ಮೃತಿರೂಪೇಣ ಸಂಸ್ಥಿತಾ
ನಮಸ್ತಸ್ಯೈ, ನಮಸ್ತಸ್ಯೈ,ನಮಸ್ತಸ್ಯೈ ನಮೋನಮಃ ॥
ಯಾದೇವೀ ಸರ್ವಭೂತೇಷು ದಯಾರೂಪೇಣ ಸಂಸ್ಥಿತಾ
ನಮಸ್ತಸ್ಯೈ, ನಮಸ್ತಸ್ಯೈ,ನಮಸ್ತಸ್ಯೈ ನಮೋನಮಃ ॥
ಯಾದೇವೀ ಸರ್ವಭೂತೇಷು ತುಷ್ಟಿರೂಪೇಣ ಸಂಸ್ಥಿತಾ
ನಮಸ್ತಸ್ಯೈ, ನಮಸ್ತಸ್ಯೈ,ನಮಸ್ತಸ್ಯೈ ನಮೋನಮಃ ॥
ಯಾದೇವೀ ಸರ್ವಭೂತೇಷು ಮಾತೃರೂಪೇಣ ಸಂಸ್ಥಿತಾ
ನಮಸ್ತಸ್ಯೈ, ನಮಸ್ತಸ್ಯೈ,ನಮಸ್ತಸ್ಯೈ ನಮೋನಮಃ ॥
ಯಾದೇವೀ ಸರ್ವಭೂತೇಷು ಭ್ರಾಂತಿರೂಪೇಣ ಸಂಸ್ಥಿತಾ
ನಮಸ್ತಸ್ಯೈ, ನಮಸ್ತಸ್ಯೈ,ನಮಸ್ತಸ್ಯೈ ನಮೋನಮಃ ॥
ಇಂದ್ರಿಯಾಣಾಮಧಿಷ್ಠಾತ್ರೀ ಭೂತಾನಾಂ ಚಾಖಿಲೇಷು ಯಾ।
ಭೂತೇಷು ಸತತಂ ತಸ್ಯೈ ವ್ಯಾಪ್ತಿ ದೇವ್ಯೈ ನಮೋ ನಮಃ ॥
ಚಿತಿರೂಪೇಣ ಯಾ ಕೃತ್ಸ್ನಮೇತ ದ್ವ್ಯಾಪ್ಯ ಸ್ಥಿತಾ ಜಗತ್
ನಮಸ್ತಸ್ಯೈ, ನಮಸ್ತಸ್ಯೈ,ನಮಸ್ತಸ್ಯೈ ನಮೋನಮಃ ॥
ಸ್ತುತಾಸುರೈಃ ಪೂರ್ವಮಭೀಷ್ಟ ಸಂಶ್ರಯಾತ್ತಥಾ ಸುರೇಂದ್ರೇಣ ದಿನೇಷುಸೇವಿತಾ।
ಕರೋತುಸಾ ನಃ ಶುಭಹೇತುರೀಶ್ವರೀ ಶುಭಾನಿ ಭದ್ರಾಣ್ಯ ಭಿಹಂತು ಚಾಪದಃ ॥
ಯಾ ಸಾಂಪ್ರತಂ ಚೋದ್ಧತದೈತ್ಯತಾಪಿತೈರಸ್ಮಾಭಿರೀಶಾಚಸುರೈರ್ನಮಶ್ಯತೇ।
ಯಾಚ ಸ್ಮೃತಾ ತತ್ಕ್ಷಣ ಮೇವ ಹಂತಿ ನಃ ಸರ್ವಾ ಪದೋಭಕ್ತಿವಿನಮ್ರಮೂರ್ತಿಭಿಃ ॥


**ಶ್ರೀಕ್ಷೇತ್ರ ಪೊಳಲಿ ದರ್ಶನ**





ಶ್ರೀಪೊಳಲಿ ರಾಜರಾಜೇಶ್ವರಿ ಮಹಾದ್ವಾರ ದಾಟಿ ದೇವಸ್ಥಾನ ಸಮೀಪಿಸುತ್ತಿರುವಾಗ ರಸ್ತೆಯ ಎರಡೂ ಕಡೆ ದಕ್ಷಿಣ ಕನ್ನಡದ ಪ್ರಮುಖ ವಾಣಿಜ್ಯರು ತಮ್ಮ ಪ್ರಣಾಮಗಳನ್ನು ಶ್ರೀದೇವಿಗೆ ಸಲ್ಲಿಸುತ್ತಿರುವ ದೊಡ್ಡ ದೊಡ್ಡ ಆಕರ್ಷಕ ಭಿತ್ತಿ ಚಿತ್ರಗಳು. ದೇವಾಲಯದ ಪ್ರಾಂಗಣದ ಎಡಗಡೆ ಶ್ರೀ ರಾಜರಾಜೇಶ್ವರೀ ಅಮ್ಮನವರ ಸನ್ನಿಧಿಯಲ್ಲಿ ನಡೆಯುವ ಹೂವಿನ ಪೂಜೆ, ಸರ್ವಾಲಂಕಾರ ಪೂಜೆ, ಲಲಿತಾ ಸಹಸ್ರನಾಮ ಪೂಜೆ, ಗಣೇಶ ಸಹಸ್ರನಾಮ, ಸುಬ್ರಹ್ಮಣ್ಯ ಸಹಸ್ರನಾಮ, ಕಾಳೀ ಸಹಸ್ರನಾಮ, ಸೌಂದರ್ಯ ಲಹರೀ, ದುರ್ಗಾ ನಮಸ್ಕಾರ, ಖಡ್ಗಮಾಲಾರ್ಚನೆ, ಗಾಯತ್ರಿ ಪೂಜೆ, ದೇವಿ ಮಹಾತ್ಮೆ ಪಾರಾಯಣ, ಸಂಪುಟಿತ ಖಡ್ಗಮಾಲಾರ್ಚನೆ, ಕಾಳೀ ಲಕ್ಷ್ಮೀ ಸರಸ್ವತೀ ಸೂಕ್ತ, ಸ್ವಯಂವರ ಪಾರ್ವತಿ ಪೂಜಾ, ಸರಸ್ವತೀ ಪೂಜಾ ಮುಂತಾದ ಸೇವೆಗಳು ಮತ್ತು ಪಾರಾಯಣೆಗಳಿರುವ ಫಲಕ.









ತಾಮ್ರದ ತಗಡುಗಳಿಂದ ಹೊದಿಸಲ್ಪಟ್ಟ ಕೃಷ್ಣವರ್ಣದ ಶಿಲಾಮಯವಾಗಿರುವ ಸುಂದರ ದೇವಾಲಯ. ಹೊರ ಅಂಗಣದ ಎರಡು ಅಂತಸ್ತುಗಳ ಪೂರ್ವ ಭಾಗದ ಗೋಪುರ. ತುಟ್ಟತುದಿಯಲ್ಲಿ ನವಿಲಿನ ಪ್ರತಿಮೆ ಇರುವ ತಾಮ್ರದ ಹೊದಿಕೆಯ ಎತ್ತರದ ಧ್ವಜಸ್ತಂಭ.




ಮೂರು ದ್ವಾರಗಳಿರುವ ಗರ್ಭಗುಡಿ.

ಮುಂದೆ ಗಣೇಶ, ಸುಬ್ರಹ್ಮಣ್ಯ, ರಾಜರಾಜೇಶ್ವರೀ, ಭದ್ರಕಾಳೀ ಸ್ತೋತ್ರಗಳಿರುವ ಫಲಕಗಳು.



ವಕ್ರತುಂಡ ಮಹಾಕಾಯ ಕೋಟಿಸೂರ್ಯ ಸಮಪ್ರಭ ।

ನಿರ್ವಿಘ್ನಂ ಕುರುಮೇ ದೇವ ಸರ್ವಕಾರ್ಯೇಷು ಸರ್ವದಾ ॥



ಷಡಾನನಂ ಕುಂಕುಮ ರಕ್ತವರ್ಣಂ ಮಹಾಮತಿಂ ದಿವ್ಯ ಮಯೂರ ವಾಹನಂ ।

ರುದ್ರಸ್ಯ ಸೂನುಂ ಸುರಸೈನ್ಯನಾಥಂ ಗುಹಂ ಸದಾ ಶರಣಮಹಂ ಭಜೇ ॥

ಸರ್ವಮಂಗಳ ಮಾಂಗಲ್ಯೇ ಶಿವೇ ಸರ್ವಾರ್ಥ ಸಾಧಿಕೇ ।

ಶರಣ್ಯೇ ತ್ರ್ಯಂಬಕೇ ಗೌರೀ ನಾರಾಯಣಿ ನಮೋಸ್ತುತೇ ॥

ಜ್ವಾಲಾ ಕರಾಳ ಮತ್ಯುಗ್ರ ಮಶೇಷಾಸುರಸೂದನಮ್ ।

ತ್ರಿಶೂಲಂ ಪಾತುನೋ ಭೀತೇರ್ಭದ್ರಕಾಲೀ ನಮೋಸ್ತುತೇ ॥

ಮಧ್ಯದಲ್ಲಿರುವ ಪ್ರಧಾನ ದ್ವಾರದಿಂದ ಮಹಾ ಸಿಂಹಾಸನದಲ್ಲಿ ವರಾಭಯ ಮುದ್ರೆಗಳಿಂದ ವಿರಾಜಿಸುತ್ತಿರುವ ಶ್ರೀಮತ್ಸಿಂಹಾಸನೇಶ್ವರೀ ಶ್ರೀ ರಾಜರಾಜೇಶ್ವರೀ ದೇವಿಯ ದಿವ್ಯ ಮೃಣ್ಮಯ ಭವ್ಯ ಬೃಹತ್ ವಿಗ್ರಹ.



ರಾಜ್ಯ ಕೋಶಾದಿಗಳನ್ನು ಕಳೆದುಕೊಂಡ ಸುರಥನ ಮಹಾ ಸಂಕಟವನ್ನು ಪರಿಹರಿಸಿದ ಮೃಣ್ಮಯ ವಿಶಿಷ್ಟ ಮೂರ್ತಿ ಶ್ರೀ ಮಹಾರಾಜ್ಞಿ ಶ್ರೀ ರಾಜರಾಜೇಶ್ವರೀ.

ಸಮಾಧಿಗೆ ಮೋಕ್ಷ ಪ್ರದಾನ ಮಾಡಿದ ವಾತ್ಸಲ್ಯ ಮೂರ್ತಿ ಶ್ರೀಮಾತೆ ಶ್ರೀ ರಾಜರಾಜೇಶ್ವರೀ.

ಅತುಲಂ ತತ್ರ ತತ್ತೇಜಃ ಸರ್ವದೇವ ಶರೀರಜಮ್ ।
ಏಕಸ್ಥಂ ತದಭೂನ್ನಾರೀ ವ್ಯಾಪ್ತಲೋಕತ್ರಯಂ ತ್ವಿಷಾ ॥

ಸಕಲ ದೇವತೆಗಳ ದೇವತೆಗಳ ತೇಜಸ್ಸಿನಿಂದ ಉದ್ಭವಿಸಿದ ಪ್ರಕಾಶ ಮೂರ್ತಿ ಶ್ರೀ ರಾಜರಾಜೇಶ್ವರೀ.

ಗತೈರ್ಮಾಣಿಕ್ಯತ್ವಂ ಗಗನಮಣಿಭಿಃ ಸಾಂದ್ರಘಟಿತಂ
ಕಿರೀಟಂ ತೇ ಹೈಮಂ ಹಿಮಗಿರಿಸುತೇ ಕೀರ್ತಯತಿ ಯಃ ।
ಸ ನೀಡೇಯಚ್ಛಾಯಾಚ್ಛುರಣಶಬಲಂ ಚಂದ್ರಶಕಲಂ
ಧನುಃ ಶೌನಾಸೀರಂ ಕಿಮಿತಿ ನ ನಿಬಧ್ನಾತಿ ಧಿಷಣಾಮ್ ॥

ಸುರಥ ಮಹಾರಾಜನಿಂದ ಸಮರ್ಪಿಸಲ್ಪಟ್ಟಿರುವ ವಜ್ರಾದಿ ನವರತ್ನ ಖಚಿತ ಕಿರೀಟದಿಂದ ಅಲಂಕೃತಳಾದ **"ಕುರುವಿಂದ ಮಣಿಶ್ರೇಣಿ ಕನತ್ಕೋಟೀರ ಮಂಡಿತೆ".**

ತನುಚ್ಛಾಯಾಭಿಸ್ತೇ ತರುಣತರಣಿಶ್ರೀಸರಣಿಭಿಃ
ದಿವಂ ಸರ್ವಾಮುರ್ವೀಮರುಣಿಮನಿ ಮಗ್ನಾಂ ಸ್ಮರತಿ ಯಃ ।
ಭವಂತ್ಯಸ್ಯ ತ್ರಸ್ಯದ್ವನಹರಿಣಶಾಲೀನನಯನಾಃ
ಸಹೋರ್ವಶ್ಯಾ ವಶ್ಯಾಃ ಕತಿ ಕತಿ ನ ಗೀರ್ವಾಣಗಣಿಕಾಃ ॥

ಉದಯಿಸುತ್ತಿರುವ ಬಾಲಸೂರ್ಯನ ಕಾಂತಿಯಂತೆ ಅರುಣ ವರ್ಣದ ಕಾಂತಿ ಪುಂಜಗಳನ್ನು ಹೊರಸೂಸುತ್ತಿರುವ **"ನಿಜಾರುಣ ಪ್ರಭಾಪೂರ ಮಜ್ಜದ್ಬ್ರಹ್ಮಾಂಡ ಮಂಡಲೆ"**ಯ ಶರೀರ.

ಅರ್ಧಚಂದ್ರಾಕಾರವಾಗಿ ಪ್ರಕಾಶಮಾನವಾದ ಹಣೆಯಲ್ಲಿ ರಾರಾಜಿಸುತ್ತಿರುವ ಸರ್ವಮಾಂಗಲ್ಯ ಕುಂಕುಮ. ಯಾವ ದಿಕ್ಕಿನಲ್ಲಿ ನಿಂತರೂ ನಮ್ಮ ಮೇಲೆ ತನ್ನ ಕೃಪಾದೃಷ್ಟಿ ಬೀರುತ್ತಾ, ನಮ್ಮನ್ನೇ ನೋಡುತ್ತಿರುವ ಮಾತೆಯ ಕರುಣಾಪೂರಿತ ದೃಷ್ಟಿ. ಸೂರ್ಯ ಚಂದ್ರ ಮಂಡಲದಂತಿರುವ ದೊಡ್ಡ ದೊಡ್ಡ ಓಲೆಗಳು. ನೀಳ ನಾಸಿಕ. ನಮಗೆ ಆಶೀರ್ವಚನವನ್ನೂ ಆಶ್ವಾಸನೆಯನ್ನೂ ನೀಡುತ್ತಿರುವ ತುಟಿಗಳು. ಕಂಠದ ಕೆಳಗೆ ವಿರಾಜಿಸುತ್ತಿರುವ ದಿವ್ಯ ಸುಂದರ ಸುವರ್ಣ ರತ್ನಭರಿತ ಹಾರಗಳು. ವರಮುದ್ರೆಯಿಂದಿರುವ ಎಡಗೈ, ಅಭಯ ಮುದ್ರೆಯಿಂದ ಒಪ್ಪುತ್ತಿರುವ ಬಲಗೈ. ಸಣ್ಣ ನಡುವಿನಲ್ಲಿರುವ ಒಡ್ಯಾಣ. ನಮ್ಮನ್ನು ಭಯದಿಂದ ಕಾಪಾಡುವ ಮತ್ತು ಕೋರಿಕೆಗಳಿಗಿಂತ ಮಿಗಿಲಾದ ಫಲವನ್ನು ದರ್ಶನ ಮಾತ್ರದಿಂದ ನೀಡುವ, ಸೀರೆಯ ನೆರಿಗೆಗಳ ಕೆಳಗಿರುವ ಪಾದಪದ್ಮಗಳು. ನಮ್ಮ ಅಜ್ಞಾನದ ಅಂಧಕಾರಕ್ಕೆ ಉದಯಿಸುತ್ತಿರುವ ಸೂರ್ಯನಂತಿರುವ ಪಾದಪದ್ಮಗಳ ಮೇಲಿರುವ ಅರಿಶಿನ ಕುಂಕುಮಗಳು. ಶ್ರೀದೇವಿಯ ಹಿಂಬದಿಯ

ಗೋಡೆಗಳ ಮೇಲೆ ರಚಿಸಲ್ಪಟ್ಟ ದೇವತೆಯರ ವಿಗ್ರಹಗಳು. ಶ್ರೀಮಹಾದೇವಿಯ ಬಲಭಾಗದಲ್ಲಿ ಶಕ್ತ್ಯಾಯುಧ ಧಾರಿಯಾದ ಮುದ್ದು ಸುಬ್ರಹ್ಮಣ್ಯ ಸ್ವಾಮಿಯ ವಿಗ್ರಹ. ಅದರ ಬಲಭಾಗದಲ್ಲಿ ಸರ್ವ ವಿಘ್ನ ನಿವಾರಕನಾದ ಗಣೇಶ. ಮಕ್ಕಳಿಬ್ಬರ ಜೊತೆಯಲ್ಲಿ ವಿರಾಜಿಸುತ್ತಿರುವ ಶ್ರೀಮಾತೆ. ಶ್ರೀಮಹಾದೇವಿಯ ಎಡ ಪಾರ್ಶ್ವದಲ್ಲಿ ಶವಾಸನದ ಮೇಲೆ ಕುಳಿತು ಎಡಗೈಲಿ ಕಪಾಲವನ್ನೂ ಬಲಗೈಲಿ ಖಡ್ಗವನ್ನೂ ಧರಿಸಿ, ತೊಡೆಯಲ್ಲಿ ರಾಕ್ಷಸನ ರುಂಡ, ಕೊರಳಲ್ಲಿ ರುಂಡ ಮಾಲೆಯನ್ನು ಧರಿಸಿ ದಂಷ್ಟ್ರಾ ಕರಾಳ ವದನೆಯಾಗಿರುವ ದಾನವ ಸಂಹಾರಿಣಿ ಭದ್ರಕಾಳಿಯ ರೌದ್ರಮೂರ್ತಿ. ರಕ್ತಬೀಜಾಸುರನ ರಕ್ತವನ್ನು ಪಾನಮಾಡಿದ ಕಾಳೀ.



ಮುಖೇನ ಕಾಲೀ ಜಗೃಹೇ ರಕ್ತಬೀಜಸ್ಯ ಶೋಣಿತಮ್ ।
ಕಾಲೀ ಕರಾಳವದನಾ ವಿನಿಷ್ಕ್ರಾಂತಾಸಿ ಪಾಶಿನೀ ।
ವಿಚಿತ್ರ ಖಟ್ವಾಂಗಧರಾ ನರಮಾಲಾ ವಿಭೂಷಣಾ ।

ದೇವಿಯ ಎಡಭಾಗದಲ್ಲಿ ರುದ್ರದೇವ ಶಿವನ ಮೂರ್ತಿ. ಗರ್ಭಗುಡಿಯ ಹೊರವಲಯದಲ್ಲಿ ಸಲ್ಲಿಸಿದ ಸೇವೆಗಳ ಪ್ರಸಾದ ಮತ್ತು ತೀರ್ಥ ನೀಡುವ ಸುವ್ಯವಸ್ಥೆ. ಹೊರವಲಯದ ಪ್ರದಕ್ಷಿಣೆ ಮುಗಿಸಿ ಬರುವಾಗ ಪವಿತ್ರ ತೀರ್ಥವಾಗಿರುವ ಕೃಷ್ಣಶಿಲೆಯ ಬಾವಿ.



ಕರುಣಾಮೃತ ಸಾಗರಿಯೂ, ಭಕ್ತವಶ್ಯಳೂ, ಭಯಹಾರಿಣಿಯೂ, ಅನಾದಿ ಸುವಾಸಿನಿಯೂ, ಸ್ವಭಾವ ಮಧುರೆಯೂ ಆದ ಜಗನ್ಮಾತೆಯ ಸಾನಿಧ್ಯದಲ್ಲಿ ಕುಳಿತು ಹೇಳೋಣ ಶ್ರೀ ರಾಜರಾಜೇಶ್ವರೀ ಅಷ್ಟಕಮ್.

**ಶ್ರೀ ರಾಜರಾಜೇಶ್ವರಿ ಅಷ್ಟಕಮ್**

ಅಂಬಾ ಶಾಂಭವಿ ಚಂದ್ರಮೌಳಿರಬಲಾऽಪರ್ಣಾ ಉಮಾ ಪಾರ್ವತೀ
ಕಾಳೀ ಹೈಮವತೀ ಶಿವಾ ತ್ರಿನಯನೀ ಕಾತ್ಯಾಯನೀ ಭೈರವೀ
ಸಾವಿತ್ರೀ ನವಯೌವನಾ ಶುಭಕರೀ ಸಾಮ್ರಾಜ್ಯಲಕ್ಷ್ಮೀಪ್ರದಾ
ಚಿದ್ರೂಪೀ ಪರದೇವತಾ ಭಗವತೀ ಶ್ರೀರಾಜರಾಜೇಶ್ವರೀ ॥ 1 ||
ಅಂಬಾ ಮೋಹಿನಿ ದೇವತಾ ತ್ರಿಭುವನೀ ಆನಂದಸಂದಾಯಿನೀ
ವಾಣೀ ಪಲ್ಲವಪಾಣಿ ವೇಣುಮುರಳೀಗಾನಪ್ರಿಯಾ ಲೋಲಿನೀ
ಕಳ್ಯಾಣೀ ಉಡುರಾಜಬಿಂಬವದನಾ ಧೂಮ್ರಾಕ್ಷಸಂಹಾರಿಣೀ
ಚಿದ್ರೂಪೀ ಪರದೇವತಾ ಭಗವತೀ ಶ್ರೀರಾಜರಾಜೇಶ್ವರೀ ॥ 2 ||

ಅಂಬಾ ನೂಪುರರತ್ನಕಂಕಣಧರೀ ಕೇಯೂರಹಾರಾವಳೀ
ಜಾತೀಚಂಪಕವೈಜಯಂತಿಲಹರೀ ಗ್ರೈವೇಯಕೈರಾಜಿತಾ
ವೀಣಾವೇಣುವಿನೋದಮಂಡಿತಕರಾ ವೀರಾಸನೇಸಂಸ್ಥಿತಾ
ಚಿದ್ರೂಪೀ ಪರದೇವತಾ ಭಗವತೀ ಶ್ರೀರಾಜರಾಜೇಶ್ವರೀ ॥ 3 ॥
ಅಂಬಾ ರೌದ್ರಿಣಿ ಭದ್ರಕಾಳೀ ಬಗಲಾ ಜ್ವಾಲಾಮುಖೀ ವೈಷ್ಣವೀ
ಬ್ರಹ್ಮಾಣೀ ತ್ರಿಪುರಾಂತಕೀ ಸುರನುತಾ ದೇದೀಪ್ಯಮಾನೋಜ್ಜ್ವಲಾ
ಚಾಮುಂಡಾ ಶ್ರಿತರಕ್ಷಪೋಷಜನನೀ ದಾಕ್ಷಾಯಣೀ ಪಲ್ಲವೀ
ಚಿದ್ರೂಪೀ ಪರದೇವತಾ ಭಗವತೀ ಶ್ರೀರಾಜರಾಜೇಶ್ವರೀ ॥ 4 ॥
ಅಂಬಾ ಶೂಲ ಧನುಃ ಕುಶಾಂಕುಶಧರೀ ಅರ್ಧೇಂದುಬಿಂಬಾಧರೀ
ವಾರಾಹೀ ಮಧುಕೈಟಭಪ್ರಶಮನೀ ವಾಣೀರಮಾಸೇವಿತಾ
ಮಲ್ಲದ್ಯಾಸುರಮೂಕದೈತ್ಯಮಥನೀ ಮಾಹೇಶ್ವರೀ ಅಂಬಿಕಾ
ಚಿದ್ರೂಪೀ ಪರದೇವತಾ ಭಗವತೀ ಶ್ರೀರಾಜರಾಜೇಶ್ವರೀ ॥ 5 ॥
ಅಂಬಾ ಸೃಷ್ಟವಿನಾಶಪಾಲನಕರೀ ಆರ್ಯಾ ವಿಸಂಶೋಭಿತಾ
ಗಾಯತ್ರೀ ಪ್ರಣವಾಕ್ಷರಾಮೃತರಸಃ ಪೂರ್ಣಾನುಸಂಧೀಕೃತಾ
ಓಂಕಾರೀ ವಿನುತಾಸುತಾರ್ಚಿತಪದಾ ಉದ್ದಂಡದೈತ್ಯಾಪಹಾ
ಚಿದ್ರೂಪೀ ಪರದೇವತಾ ಭಗವತೀ ಶ್ರೀರಾಜರಾಜೇಶ್ವರೀ ॥ 6 ॥
ಅಂಬಾ ಶಾಶ್ವತ ಆಗಮಾದಿವಿನುತಾ ಆರ್ಯಾ ಮಹಾದೇವತಾ
ಯಾ ಬ್ರಹ್ಮಾದಿಪಿಪೀಲಿಕಾಂತಜನನೀ ಯಾ ವೈ ಜಗನ್ಮೋಹಿನೀ
ಯಾ ಪಂಚಪ್ರಣವಾದಿರೇಫಜನನೀ ಯಾ ಚಿತ್ಕಳಾಮಾಲಿನೀ
ಚಿದ್ರೂಪೀ ಪರದೇವತಾ ಭಗವತೀ ಶ್ರೀರಾಜರಾಜೇಶ್ವರೀ ॥ 7 ॥
ಅಂಬಾಪಾಲಿತ ಭಕ್ತರಾಜದನಿಶಂ ಅಂಬಾಷ್ಟಕಂ ಯಃ ಪಠೇತ್
ಅಂಬಾಲೋಕಕಟಾಕ್ಷವೀಕ್ಷ ಲಲಿತಂ ಚೈಶ್ವರ್ಯಮವ್ಯಾಹತಂ
ಅಂಬಾ ಪಾವನಮಂತ್ರರಾಜಪಠನಾದಂತೇ ಚ ಮೋಕ್ಷಪ್ರದಾ
ಚಿದ್ರೂಪೀ ಪರದೇವತಾ ಭಗವತೀ ಶ್ರೀರಾಜರಾಜೇಶ್ವರೀ ॥ 8 ॥



ಜಪೋ ಜಲ್ಪಃ ಶಿಲ್ಪಂ ಸಕಲಮಪಿ ಮುದ್ರಾವಿರಚನಾ

ಗತಿಃ ಪ್ರಾದಕ್ಷಿಣ್ಯಕ್ರಮಣಮಶನಾದ್ಯಾಹುತಿವಿಧಿಃ ।

ಪ್ರಣಾಮಸ್ಸಂವೇಶಸ್ಸುಖಮಖಿಲಮಾತ್ಮಾರ್ಪಣದೃಶಾ

ಸಪರ್ಯಾಪರ್ಯಾಯಸ್ತವ ಭವತು ಯನ್ಮೇ ವಿಲಸಿತಮ್ ॥

ವಿಶ್ವೇಶ್ವರಿಯಲ್ಲಿ ಆತ್ಮಾರ್ಪಣಬುದ್ಧಿಯಿಂದ ನಮ್ಮ ಮಾತೆಲ್ಲಾ ಮಂತ್ರ ಜಪವಾಗಲಿ, ನಮ್ಮ ಕರದಿಂದ ಮಾಡುವ ಕೆಲಸವೆಲ್ಲಾ ಧ್ಯಾನ ಮುದ್ರೆಗಳಾಗಲಿ, ನಮ್ಮ ಸಂಚಾರವೆಲ್ಲಾ ನಿನ್ನ ಪ್ರದಕ್ಷಿಣೆಯಾಗಲಿ, ನಾವು ತಿನ್ನುವುದು ನಿನಗೆ ಆಹುತಿಯಾಗಲಿ, ನಾವು ಮಲಗಿ ಹೊರಳಾಡುವುದು ನಿನಗೆ ಸಾಷ್ಟಾಂಗ ನಮಸ್ಕಾರವಾಗಲಿ, ನಮಗೆ ಶಬ್ದ ಸ್ಪರ್ಶಾದಿಗಳಿಂದ ಉಂಟಾಗುವ ಸುಖವೆಲ್ಲಾ ನಿನ್ನ ಷೋಡಶೋಪಚಾರ ಪೂಜೆಯಾಗಲಿ ಎಂದು ಪ್ರಾರ್ಥಿಸುತ್ತಾ,

ಚಿತಿರೂಪೇಣ ಯಾ ಕೃತ್ಸ್ನ ಮೇತ ದ್ವ್ಯಾಪ್ಯ ಸ್ಥಿತಾ ಜಗತ್

ನಮಸ್ತಸ್ಯೈ, ನಮಸ್ತಸ್ಯೈ,ನಮಸ್ತಸ್ಯೈ ನಮೋನಮಃ ॥

ತನ್ನ ಚಿನ್ಮಯ ಚಿದ್ರೂಪದಿಂದ ಜಗದ್ವ್ಯಾಪಿಯಾಗಿರುವ ಶ್ರೀರಾಜರಾಜೇಶ್ವರೀ ದೇವಿಗೆ ಪುನಃ ಪುನಃ ವಂದಿಸುತ್ತಾ, ಮಾತೆಯ ದಿವ್ಯ ಮಂಗಳ ರೂಪವನ್ನು ಮತ್ತೇ ಮತ್ತೇ ದರ್ಶಿಸುತ್ತಾ, ತಿರುಗಿ ತಿರುಗಿ ನೋಡಿ ಕಣ್ತುಂಬಿಕೊಳ್ಳುತ್ತಾ ದೇವಾಲಯದ ಹೊರಗಿನ ಅಂಗಳದ ಪ್ರವೇಶ.

ದುರ್ಗಾ ದೇವಿಯ ಪುಟ್ಟ ದೇವಾಲಯ.

ಮಹಿಷಾಸುರನನ್ನು ಪಾದಗಳಿಂದ ಆಕ್ರಮಿಸಿ, ಅವನನ್ನು ಶೀರ್ಷದಿಂದ ಭಿನ್ನನಾಗುವಂತೆ ತುಳಿದು ಎಡಗೈಯಿಂದ ಮಹಿಷನ ಬಾಲವನ್ನು ಹಿಡಿದುಕೊಂಡು ಬಲಗೈಯಲ್ಲಿ ಶೂಲವನ್ನು ಹಿಡಿದುಕೊಂಡಿರುವ ದುರ್ಗೆ.




ದುರ್ಗಾ ಭಗವತೀ ಭದ್ರಾ ಯಯೇದಂ ಧಾರ್ಯತೇ ಜಗತ್ ।

ಸಮಸ್ತ ಲೋಕ ರಕ್ಷಣೆಗೆ ಮತ್ತು ಅಶುಭದ ಅವಸಾನಕ್ಕೆ ನೆಲೆಸಿರುವ ದುರ್ಗೆ.

ದುರ್ಗಾಯೈ ದುರ್ಗಪಾರಾಯೈ ಸಾರಾಯೈ ಸರ್ವಕಾರಿಣ್ಯೈ
ಖ್ಯಾತ್ಯೈ ತಥೈವ ಕೃಷ್ಣಾಯೈ ಧೂಮ್ರಾಯೈ ಸತತಂ ನಮಃ ॥
ಅತಿಸೌಮ್ಯತಿರೌದ್ರಾಯೈ ನತಾಸ್ತಸ್ಯೈ ನಮೋ ನಮಃ
ನಮೋ ಜಗತ್ಪ್ರತಿಷ್ಠಾಯೈ ದೇವ್ಯೈ ಕೃತ್ಯೈ ನಮೋ ನಮಃ ॥

ದುರ್ಗಮ ಸಂಸಾರ ಸಾಗರ ಸಂತರಣ ಮಾಡುವ ನೌಕೆಯಾಗಿರುವ ದುರ್ಗೆಯನ್ನು ಸ್ತುತಿಸುತ್ತಾ,

**ಶ್ರೀ ದುರ್ಗಾಷ್ಟಕಮ್**

ಕಾತ್ಯಾಯನಿ ಮಹಾಮಾಯೇ ಖಡ್ಗಬಾಣಧನುರ್ಧರೇ ।
ಖಡ್ಗಧಾರಿಣಿ ಚಂಡಿ ದುರ್ಗಾದೇವಿ ನಮೋಽಸ್ತು ತೇ ॥ ೧ ॥
ವಸುದೇವಸುತೇ ಕಾಲಿ ವಾಸುದೇವಸಹೋದರೀ ।
ವಸುಂಧರಾಶ್ರಿಯೇ ನಂದೇ ದುರ್ಗಾದೇವಿ ನಮೋಽಸ್ತು ತೇ ॥ ೨ ॥
ಯೋಗನಿದ್ರೇ ಮಹಾನಿದ್ರೇ ಯೋಗಮಾಯೇ ಮಹೇಶ್ವರೀ ।
ಯೋಗಸಿದ್ಧಿಕರೀ ಶುದ್ಧೇ ದುರ್ಗಾದೇವಿ ನಮೋಽಸ್ತು ತೇ ॥ ೩ ॥
ಶಂಖಚಕ್ರಗದಾಪಾಣೇ ಶಾರ್ಙ್ಗಜ್ಯಾಯತಬಾಹವೇ ।
ಪೀತಾಂಬರಧರೇ ಧನ್ಯೇ ದುರ್ಗಾದೇವಿ ನಮೋಽಸ್ತು ತೇ ॥ ೪ ॥

ಋಗ್ಯಜುಸ್ಸಾಮಾಥರ್ವಾಣಶ್ಚತುಸ್ಸಾಮಂತಲೋಕಿನೀ ।
ಬ್ರಹ್ಮಸ್ವರೂಪಿಣಿ ಬ್ರಾಹ್ಮಿ ದುರ್ಗಾದೇವಿ ನಮೋಽಸ್ತು ತೇ ॥ ೫ ॥
ವೃಷ್ಣೀನಾಂ ಕುಲಸಂಭೂತೇ ವಿಷ್ಣುನಾಥಸಹೋದರೀ ।
ವೃಷ್ಣಿರೂಪಧರೇ ಧನ್ಯೇ ದುರ್ಗಾದೇವಿ ನಮೋಽಸ್ತು ತೇ ॥ ೬ ॥
ಸರ್ವಜ್ಞೇ ಸರ್ವಗೇ ಶರ್ವೇ ಸರ್ವೇಶೇ ಸರ್ವಸಾಕ್ಷಿಣೀ ।
ಸರ್ವಾಮೃತಜಟಾಭಾರೇ ದುರ್ಗಾದೇವಿ ನಮೋಽಸ್ತು ತೇ ॥ ೭ ॥
ಅಷ್ಟಬಾಹು ಮಹಾಸತ್ತ್ವೇ ಅಷ್ಟಮೀ ನವಮೀ ಪ್ರಿಯೇ ।
ಅಟ್ಟಹಾಸಪ್ರಿಯೇ ಭದ್ರೇ ದುರ್ಗಾದೇವಿ ನಮೋಽಸ್ತು ತೇ ॥ ೮ ॥
ದುರ್ಗಾಷ್ಟಕಮಿದಂ ಪುಣ್ಯಂ ಭಕ್ತಿತೋ ಯಃ ಪಠೇನ್ನರಃ ।
ಸರ್ವಕಾಮಮವಾಪ್ನೋತಿ ದುರ್ಗಾಲೋಕಂ ಸ ಗಚ್ಛತಿ ॥
ಇತಿ ಶ್ರೀ ದುರ್ಗಾಷ್ಟಕಂ ॥

ಪ್ರದಕ್ಷಿಣೆಯ ಪಥದಲ್ಲಿ ರಥೋತ್ಸವಕ್ಕಾಗಿ ಮೀಸಲಾಗಿರುವ ರಥಗಳು.






ಅರ್ಚಕರಿಂದ ಪವಿತ್ರ ತೀರ್ಥದ ಪ್ರೋಕ್ಷಣೆ ಮತ್ತು ತೀರ್ಥದ ನೀಡಿಕೆ. ಖಡ್ಗ ಕಪಾಲಧಾರಿಯಾಗಿ, ಪತ್ನೀ ಸಮೇತನಾಗಿರುವ ಕ್ಷೇತ್ರಪಾಲನ ದರ್ಶನ.

**ಜಯಮಸ್ತು, ಲಾಭಮಸ್ತು, ದಿಗ್ವಿಜಯಮಸ್ತು, ಪುನರ್ದರ್ಶನ ಪ್ರಾಪ್ತಿರಸ್ತು.**

ನಮ್ಮ ನಾದಾರ್ಚನೆ ತಂಡದಿಂದ ಸ್ಮರಿಸಲ್ಪಟ್ಟ ಸುರಥ ಮತ್ತು ಸಮಾಧಿಗಳಿಗೆ ಅನುಗ್ರಹಿಸಿದ ಲೋಕಮಾತೆ, ಎಲ್ಲ ಕಷ್ಟಗಳನ್ನೂ ಕೂಡಲೇ ಪರಿಹರಿಸುವ ಮಂಗಳಮಯಳಾದ ಶ್ರೀರಾಜರಾಜೇಶ್ವರಿಯು ನಮಗೆ ಶುಭ ಶ್ರೇಯಸ್ಸನ್ನುಂಟುಮಾಡಲಿ, ನಮ್ಮ ಕಷ್ಟಗಳನ್ನೆಲ್ಲಾ ಪರಿಹರಿಸಲಿ, ನಮ್ಮೆಲ್ಲ ಅಭೀಷ್ಟಗಳನ್ನು ನೆರವೇರಿಸಲಿ, ನಮ್ಮೆಲ್ಲ ಇಹ ಪರ ಬಯಕೆಗಳಿಗೆ ತಥಾಸ್ತು ಎನ್ನಲಿ, ಶ್ರೀರಾಜರಾಜೇಶ್ವರಿಯ ಅನುಗ್ರಹ ಜಗದ ಮೇಲಿರಲಿ ಎಂದು ಪ್ರಾರ್ಥಿಸುತ್ತಾ,

**। ಸರ್ವೇ ಜನಾ ಸುಖಿನೋ ಭವಂತು । ಸಕಲ ಸನ್ಮಂಗಳಾನಿ ಭವಂತು । ಶ್ರೀರಸ್ತು । ಶುಭಮಸ್ತು ।**

**ಓಂ ಶಾಂತಿಃ ಶಾಂತಿಃ ಶಾಂತಿಃ**

